# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಜಿಎಂ/3349/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 10/02/2021.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀ ವಿಜಯ, ಹಿಂದಿನ ಕಾರ್ಯಪಾಲಕ ಅಭಿಯಂತರರು, ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಬೆಂಗಳೂರು ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

1. ದೂರುದಾರರಾದ ಶ್ರೀ ರವೀಂದ್ರ ಸಿ. ಹೊಸಮನಿ, ತಡವಳಗ ಗ್ರಾಮ ಮತ್ತು ಅಂಚೆ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ ಗಿರಿಧರ ಧವನ್, ಎನ್.ಸಿ.ಸಿ. ಕಂಪೆನಿಯ ಮುಖ್ಯಸ್ಥರು, ವಿಜಯಪುರ ಜಿಲ್ಲೆ (2) ಮತ್ತು ಶ್ರೀ ವಿಜಯ, ಕಾರ್ಯಪಾಲಕ ಅಭಿಯಂತರರು, ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಬೆಂಗಳೂರು (ಇನ್ನು ಮುಂದೆ 'ಎದುರುದಾರರು- 1 ಮತ್ತು 2 ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

2. ದೂರಿನ ಸಂಕ್ಷಿಪ್ತ ಸಾರಾಂಶ:

ವಿಜಯಪುರ ಜಿಲ್ಲೆ ಇಂಡಿ ತಾಲ್ಲೂಕಿನಲ್ಲಿ ಸುಮಾರು 40 ಕೋಟಿಯ ಬಿಲ್ಡಿಂಗ್ ಕಾಮಗಾರಿಯು ಚಾಲ್ತಿಯಲ್ಲಿದ್ದು, ಸದರಿ ಎಲ್ಲಾ ಕಾಮಗಾರಿಗಳು ರಾಷ್ಟ್ರೀಯ ಮಾಧ್ಯಮಿಕ ಹಾಗೂ ಹಾಸ್ಟೇಲ್‌ಗಳು ಇನ್ನಿತರ ಕಾಮಗಾರಿಗಳು

ಆಗಿದ್ದು ತಡವಲಗಾ ಗ್ರಾಮದಲ್ಲಿ ನಿರ್ಮಾಣ ಹಂತದಲ್ಲಿಯೇ ವಸತಿ ಶಾಲೆಗಳು ಬೀಳುವ ಸ್ಥಿತಿಯಲ್ಲಿದ್ದು ಕಾಮಗಾರಿ ಪೂರ್ಣಗೊಂಡಿಲ್ಲ. ಆರ್.ಎಮ್. ಎಸ್. ಇಲಾಖೆಯ ಅಭಿಯಂತರರು, ಈ ಕಳಪೆ ಕಾಮಗಾರಿಯಲ್ಲಿ ಶಾಮೀಲಾಗಿದ್ದಾರೆ. ಸೂಕ್ತ ತನಿಖೆಯಾಗಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿ ದೂರು ಸಲ್ಲಿಸಿರುತ್ತಾರೆ.

3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ವಿಜಯಪುರ ಇವರ ಪತ್ರ ದಿನಾಂಕ: 20/05/2016 ರಲ್ಲಿ ಇಂಡಿ ತಾಲ್ಲೂಕಿನಲ್ಲಿ ಆರ್.ಎಂ.ಎಸ್.ಎ. ಯೋಜನೆಯಡಿ ಎನ್.ಸಿ.ಸಿ. ಕಂಪನಿಯಿಂದ ಕಳಪೆ ಕಾಮಗಾರಿ ಆಗಿರುವ ಬಗ್ಗೆ ತನಿಖೆ ಮಾಡುವ ಕುರಿತು ಉಪ ನಿರ್ದೇಶಕರು ಸಮನ್ವಯಾಧಿಕಾರಿಗಳು, ಆರ್.ಎಂ.ಎಸ್.ಎ., ಸಾರ್ವಜನಿಕ ಶಿಕ್ಷಣ ಇಲಾಖೆ ವಿಜಯಪುರ ಇವರಿಗೆ ಆದೇಶಿಸಿದ್ದು ಸದರಿಯವರು ಇಂಡಿ ತಾಲ್ಲೂಕಿನ ತಡವಲಗಾ ಗ್ರಾಮದಲ್ಲಿ ಆರ್.ಎಂ.ಎಸ್.ಎ. ಯೋಜನೆಯಡಿ ನಿರ್ಮಾಣವಾಗುತ್ತಿರುವ ಒಂದೇ ಒಂದು ಹೆಣ್ಣುಮಕ್ಕಳ ವಸತಿನಿಲಯ ಕಟ್ಟಡದ ಕಾಮಗಾರಿಯನ್ನು ವೀಕ್ಷಿಸಿ ವರದಿ ನೀಡಿರುತ್ತಾರೆ. ಕಛೇರಿಯಲ್ಲಿ ಯಾವುದೇ ತಾಂತ್ರಿಕ ಸಿಬ್ಬಂದಿಗಳು ಇರುವುದಿಲ್ಲ; ಆರ್.ಎಂ.ಎಸ್.ಎ. ಯೋಜನೆಯಡಿ ನಿರ್ಮಾಣವಾಗುತ್ತಿರುವ 05 ಕಾಮಗಾರಿ ಕಟ್ಟಡಗಳ ಬಗ್ಗೆ ಸಮರ್ಥನೆ ನೀಡಲು ಸಾಧ್ಯವಾಗುವುದಿಲ್ಲ; ಕಾಮಗಾರಿಗಳ ಅನುಷ್ಠಾನದ ಕುರಿತು ರಾಜ್ಯಮಟ್ಟದಲ್ಲಿ ಟೆಂಡರ್ ಪ್ರಕ್ರಿಯೆ ಜರುಗಿಸಿ ಎನ್.ಸಿ.ಸಿ. ಕಂಪನಿಗೆ ವಹಿಸಿರುತ್ತಾರೆಂದು ತಿಳಿಸಿರುತ್ತಾರೆ. ಕಾರಣ ತನಿಖೆ ಮಾಡಿ ವರದಿ ನೀಡುವಂತೆ ರಾಜ್ಯ ಯೋಜನಾ ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು ಇವರಿಗೆ ಸೂಚಿಸಿರುತ್ತಾರೆ.

4. ರಾಜ್ಯ ಯೋಜನಾ ನಿರ್ದೇಶಕರು, ಆರ್.ಎಂ.ಎಸ್.ಎ. ಮತ್ತು ಎಸ್.ಎಸ್.ಎ., ಬೆಂಗಳೂರು ಇವರು ತಮ್ಮ ಪತ್ರ ದಿನಾಂಕ: 20/09/2016 ರಲ್ಲಿ,

ದೂರಿನ ಪ್ರತಿ ಪರಿಶೀಲಿಸಲಾಗಿ ಎಸ್.ಎಸ್.ಎ/ಆರ್.ಎಂ.ಎಸ್.ಎ. ಕಾಮಗಾರಿಗಳಗೆ ಸಂಬಂಧಪಟ್ಟಿಲ್ಲದೆ ಇರುವುದು ಕಂಡುಬಂದಿದೆ; ಈ ಕಛೇರಿಗೆ ಸಂಬಂಧಪಟ್ಟಿಲ್ಲ ಎಂದು ನಮೂದಿಸಿರುತ್ತಾರೆ.

**5. ಜಿಲ್ಲಾ ಯೋಜನಾ ಉಪ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ವಿಜಯಪುರ ಇವರು ಸಲ್ಲಿಸಿದ ತನಿಖಾ ವರದಿಯಲ್ಲಿ:-**

(1) ಆರ್.ಎಂ.ಎಸ್.ಎ. ಹೆಣ್ಣು ಮಕ್ಕಳ ವಸತಿ ನಿಲಯ **ಕಾಮನಕೇರಿ ತಾಲ್ಲೂಕು, ಬಸವನ ಬಾಗೇವಾಡಿ** ಇಲ್ಲಿಗೆ ದಿನಾಂಕ: 21/06/2019 ರಂದು ಕಟ್ಟಡ ಕಾಮಗಾರಿ ಪರಿಶೀಲನೆಗಾಗಿ ಖುದ್ದಾಗಿ ಭೇಟಿ ನೀಡಿ ಕಟ್ಟಡದ ಕಾಮಗಾರಿಯನ್ನು ಪರಿಶೀಲಿಸಲಾಗಿರುತ್ತದೆ;

- ಕಟ್ಟಡದ ಹೊರಭಾಗದಲ್ಲಿ ನಾಲ್ಕು ಗೋಡೆಗಳಲ್ಲಿ ಬಿರುಕುಗಳು ಕಂಡುಬಂದಿದ್ದು ಮುಂಭಾಗದ ಬಲಗಡೆ ಗೋಡೆಯ ಮೇಲ್ಭಾಗದಲ್ಲಿ ಬಿರುಕು ಇದೆ.
- ಕಟ್ಟಡದ ಮೇಲ್ಮಹಡಿ ಹಾಗೂ ನೆಲಮಹಡಿಯಲ್ಲಿನ ಗೋಡೆಗಳಲ್ಲಿ ಬಿರುಕು ಇವೆ. ಕೋಣೆಗಳ ಬಾಗಿಲುಗಳ ಕಟ್ಟಿಗೆ ಚೌಕಟಗಳು ಗೋಡೆಗೆ ಸರಿಯಾಗಿ ಜೋಡನೆಯಾಗದೇ ಬಾಗಿಲು ಹಾಗೂ ಗೋಡೆ ಮಧ್ಯೆ ಸೀಳು ಬಿಟ್ಟಿವೆ. ಈ ಸೀಳುಗಳು ಅಗಲವಾಗಿದೆ. ಒಂದಂತೂ ಚೌಕಟ್ಟು ಗೋಡೆ ಬಿಟ್ಟು ಹೊರಗೆ ಬಂದಿದೆ. ಹೆಚ್ಚಾಗಿ ಬಾಗಿಲುಗಳು ಸರಿಯಾಗಿ ಮುಚ್ಚಲು ಬರುತ್ತಿಲ್ಲ. ಮುಚ್ಚಲು ಕಷ್ಟವಾಗುತ್ತಿರುವುದನ್ನು ಗಮನಿಸಿದೆ.
- ವಸತಿ ನಿಲಯಗಳ ಕೋಣೆಗಳ ಒಳಭಾಗದಲ್ಲಿ ಮೇಲ್ಭಾಗದ ಬೀಮ್‌ಗೆ ಹೊಂದಿಕೊಂಡು ಕೆಳಗಡೆ ಅಡ್ಡಲಾಗಿ ಬಿರುಕುಗಳಿವೆ.

- ಶೌಚಾಲಯಗಳ ಹಾಗೂ ಸ್ನಾನಗೃಹಗಳಲ್ಲಿ ಬಿರುಕುಗಳಿವೆ. ಟೈಲ್ಸ್‌ಗಳ ಜೋಡನೆ ಸರಿಯಾಗಿಲ್ಲ. ಶಿಥಿಲವಾದ ಜೋಡಣೆ ಇದೆ.
- ಹತ್ತುವ ಮಹಡಿಯ ಸ್ಟೀರ್‌ಕೇಸ್‌ದ ಗೋಡೆಗೆ ಬಿರುಕುಗಳಿವೆ.
- ವಿಕಲಚೇತನ ಮಕ್ಕಳಿಗಾಗಿ ನಿರ್ಮಿಸಿದ ಶೌಚಾಲಯದ ಸ್ಲೈಡಿಂಗ್ ಬಾಗಿಲು ಸರಿಯಾಗಿ ಜೋಡಿಸದೇ ಇರುವುದರಿಂದ ಸರಿಯಾಗಿ ಸರಿದಾಡುತ್ತಿಲ್ಲ.
- ಒಳಕೊಂಡಿಗಳು ಸರಿಯಾಗಿ ಹಾಕಲು ಬರುತ್ತಿಲ್ಲ.

ಪ್ರಯುಕ್ತ ಸದರಿ ಕಟ್ಟಡ ಕಾಮಗಾರಿಯು ಮೇಲ್ನೋಟಕ್ಕೆ ಕಳಪೆಯಾಗಿರುವುದು ಎಂದು ಕಂಡು ಬರುತ್ತದೆ ಎಂದು ನಮೂದಿಸಿರುತ್ತಾರೆ.

(2) ಆರ್.ಎಂ.ಎಸ್.ಎ. ಹೆಣ್ಣು ಮಕ್ಕಳ ವಸತಿ ನಿಲಯ **ತಡವಲಗಾ ತಾಲ್ಲೂಕು, ಇಂಡಿ** ಇಲ್ಲಿಗೆ ದಿನಾಂಕ: 28/06/2019 ರಂದು ಕಟ್ಟಡ ಕಾಮಗಾರಿ ಪರಿಶೀಲನೆಗಾಗಿ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಲಾಗಿದೆ.

- ಕಟ್ಟಡದ ಹೊರ ಗೋಡೆಯು ಬಿರುಕು ಬಿಟ್ಟಿರುತ್ತವೆ.
- ಪ್ರವೇಶ ದ್ವಾರದ ಬಲಗಡೆ ನೀರು ಸಂಗ್ರಹಕ್ಕಾಗಿ ನೀರಿನ ಟ್ಯಾಂಕ್ ನಿರ್ಮಿಸಿದ್ದು, ಮೇಲ್ಮೈಯಿಂದ ಒಂದು ಅಡಿ ಕೆಳಗೆ ನಾಲ್ಕು ಕಡೆ ಬಿರುಕು ಬಿಟ್ಟಿದೆ. ಅದರ ಮೇಲಿನ ಮುಚ್ಚಳಕೆ ಲಾಕ್ ಮಾಡುವ ವ್ಯವಸ್ಥೆ ಇಲ್ಲ ಇದು ಮಕ್ಕಳಿಗೆ ಸುರಕ್ಷತೆ ಅಲ್ಲ,
- ಡೈನಿಂಗ್ ರೂಮನಲ್ಲಿ ಗೋಡೆ ಬಿರುಕು ಬಿಟ್ಟಿದೆ.
- ಶೌಚಾಲಯಗಳ ಟಾಯಿಲ್ಸ್‌ಗಳ ಜೋಡಣೆ ಸರಿಯಾಗಿ ಮಾಡಿರುವುದಿಲ್ಲ.
- ಎಲ್ಲಾ ಕೋಣೆಗಳ ಬಾಗಿಲುಗಳು, ಕಿಟಕಿಗಳ ಗೋಡೆಗೆ ಹೊಂದಿಕೊಂಡು ಸರಿಯಾಗಿ ಜೋಡಣೆಯಾಗಿಲ್ಲ. ಸುಲಭವಾಗಿ ತೆರೆಯಲು, ಮುಚ್ಚಲು ಬರುವುದಿಲ್ಲ.

- ಶೌಚಾಲಯ ಮತ್ತು ಹ್ಯಾಂಡ್ ವಾಶ್‌ಗೆ ಅಳವಡಿಸಿದ ನಲ್ಲಿಗಳು ಗುಣಮಟ್ಟದ್ದಾಗಿರುವುದಿಲ್ಲ.
- ನೆಲಮಹಡಿಯ ಎಲ್ಲಾ ಕೋಣೆಗಳು ಮೇಲ್ಛಾವಣಿಯ ಭೀಮಗೆ ಹೊಂದಿಕೊಂಡು ಕೆಳಭಾಗದಲ್ಲಿ ಅಡ್ಡಲಾಗಿ (Horizontal) ಬಿರುಕುಗಳು ಬಿಟ್ಟಿವೆ.
- ವಿಕಲಚೇತನ ಮಕ್ಕಳಿಗೆ ನಿರ್ಮಿಸಲಾದ ಶೌಚಾಲಯದ ಸ್ಲೈಡಿಂಗ್ ಗೇಟ್ ಕಾರ್ಯನಿರ್ವಹಿಸುತ್ತಿಲ್ಲ.
- ಶೌಚಾಲಯದಲ್ಲಿ ಅಳವಡಿಸಿರುವ ವಾಟರ್ ಹಿಟರ್ ಆಯ್.ಎಸ್.ಆಯ್. ಮಾರ್ಕ್ ಇರುವುದಿಲ್ಲ ಇದರಿಂದ ಮಕ್ಕಳಿಗೆ ಈ ಉಪಕರಣಗಳು ಸುರಕ್ಷತೆಯಾಗಿರುವುದಿಲ್ಲ.
- ಮೊದಲನೇ ಮಹಡಿಯ ಎಲ್ಲಾ ಕೋಣೆಗಳ ಗೋಡೆಗಳು ಬಿರುಕು ಬಿಟ್ಟಿರುತ್ತವೆ.
- ಗ್ಯಾಲರಿಗೆ ಕೆಳಭಾಗದಲ್ಲಿ ಲಂಬವಾಗಿ ಅಳವಡಿಸಿರುವ ಟೈಯಿಲ್ಸ್ (ಸ್ಕರ್‌ಟಿಂಗ್) ಗಳು ಅಲ್ಲಲ್ಲಿ ಕಳಚಿ ಬಿದ್ದಿರುತ್ತವೆ.

ಕಟ್ಟಡ ಕಾಮಗಾರಿಯು ಮೇಲ್ನೋಟಕ್ಕೆ ಕಳಪೆಯಾಗಿರುವುದು ಕಂಡುಬಂದಿರುತ್ತದೆ ಎಂದು ನಮೂದಿಸಿರುತ್ತಾರೆ.

(3) ಆರ್.ಎಂ.ಎಸ್.ಎ. ಹೆಣ್ಣು ಮಕ್ಕಳ ವಸತಿ ನಿಲಯ **ಅರಕೇರಿ ತಾಲ್ಲೂಕು, ವಿಜಯಪುರ** ಗ್ರಾಮೀಣ ವಲಯ ಇಲ್ಲಿಗೆ ದಿನಾಂಕ: 21/06/2019 ರಂದು ಕಟ್ಟಡ ಕಾಮಗಾರಿ ಪರಿಶೀಲಿಸಲಾಗಿದೆ.

- ಕಟ್ಟಡದ ನಾಲ್ಕು ಗೋಡೆಗಳ ಮೇಲೆ ಬಿರುಕುಗಳಿವೆ.
- ವಿಕಲಚೇತನ ಮಕ್ಕಳಿಗೆ ನಿರ್ಮಿಸಿದ ಶೌಚಾಲಯಗಳ ಬಾಗಿಲು ಕಿತ್ತುಹೋಗಿದೆ.
- ಸ್ಕರ್ಟಿಂಗ್ ಟೈಲ್ಸ್ ಗಳ ಜೋಡಣೆ ಗಟ್ಟಿಯಾಗಿಲ್ಲ.
- ಒಳ ವರಾಂಡಾದಲ್ಲಿ ಅಂದರೆ ಒಳಗೆ ಪ್ರವೇಶದ ಬಲಭಾಗದ ಗೋಡೆಯ ಮೇಲಿನ ಪ್ಲಾಸ್ಟರ್ ಕಿತ್ತು ಬೀಳುತ್ತಿದೆ.

- 3-4 ಶೌಚಾಲಯಗಳ ಗೋಡೆಗಳಿಗೆ ಬಿರುಕು ಬಿಟ್ಟಿದೆ.
- ವಾಶ್ ಬೇಸಿನ್ ಗೋಡೆಗಳಿಗೆ ಬಿರುಕು ಬಿಟ್ಟಿದೆ.
- ಅದರಂತೆ ಒಂದು ಕೋಣೆಯ ಬಾಗಿಲಿನ ಹಿಂದ ಚೌಕಟ್ಟಕ್ಕೆ ಹೊಂದಿಕೊಂಡ ಗೋಡೆಯು 5 ಸೆಂ.ಮೀ. ಅಗಲವಿರುವ ಗಿಲಾವು ಕಿತ್ತು ಹೋಗಿದೆ.
- ಮೇಲ್ಮಹಡಿಯಲ್ಲಿ ಒಂದು ಕಡೆ 10 ಟೈಲ್ಸ್ ಗಳು ಸರಿಯಾಗಿ ಜೋಡಣೆ ಆಗದೇ ಉಬ್ಬಿದೆ.

ಕಾಮಗಾರಿಯು ಮೇಲ್ನೋಟಕ್ಕೆ ಕಳಪೆಯಾಗಿರುವುದು ಕಂಡುಬರುತ್ತದೆ ಎಂದು ನಮೂದಿಸಿರುತ್ತಾರೆ.

(4) ಆರ್.ಎಂ.ಎಸ್.ಎ. ಹೆಣ್ಣು ಮಕ್ಕಳ ವಸತಿ ನಿಲಯ **ಹಂದಿಗನೂರು ತಾಲ್ಲೂಕು, ಸಿಂದಗಿ,** ದಿನಾಂಕ: 27/06/2019 ರಂದು ಕಟ್ಟಡ ಕಾಮಗಾರಿ ಪರಿಶೀಲಿಸಲಾಗಿದೆ.

- ಕಟ್ಟಡದ ಬಲಭಾಗದಲ್ಲಿ ಗೋಡೆಯ ಮೇಲೆ ಬಿರಕು ಇದೆ.
- ವರಾಂಡದ ಸ್ಲ್ಯಾಪ್ ಹಾಗೂ ಅದಕ್ಕೆ ಹೊಂದಿಕೊಂಡ ಗೋಡೆ ನಡುವೆ ಅಡ್ಡಲಾಗಿ ಬಿರುಕು ಇದೆ.
- ಕೆಳಮಹಡಿಯ ಕೋಣೆಗಳ ಒಳಗೋಡೆಗಳಿಗೆ ಬಿರುಕುಗಳಿವೆ.
- ಕಟ್ಟಡದ ಬಲಭಾಗದ ಸ್ನಾನಗೃಹದ ಗೋಡೆಗಳಿಗೆ ಅಡ್ಡಲಾಗಿ, ಲಂಬವಾಗಿ, ಅಡ್ಡಾದಿಡ್ಡಿಯಾಗಿ ಬಿರುಕುಗಳಿವೆ.
- ಅಳವಡಿಸಿದ ಗೀಜರ್‌ನ ಪಕ್ಕದಲ್ಲಿ ಬಿರುಕು ಇದೆ.
- ಊಟದ ಮನೆಯ ಮೂರು ಗೋಡೆಗಳಿಗೆ ಬಿರುಕುಗಳಿವೆ.
- ಅಡುಗೆ ಮನೆಯ ಒಂದು ಗೋಡೆಗೆ ಬಿರುಕುಗಳಿವೆ.

- ಸ್ಟೋರ್ ರೂಂ ಸ್ಲ್ಯಾಬ ಹಾಗೂ ಲಂಬಗೋಡೆಗೆ ಹೊಂದಿಕೊಂಡು ಒಂದು ಬದಿಯಲ್ಲಿ ಬಿರುಕು ಇದ್. ಹಾಗೂ ಒಂದು ಗೋಡೆಯ ಮೇಲೆ ಬಿರುಕು ಇದೆ.
- ವಾಶ್ ರೂಮ್‌ದ ಗೋಡೆಗಳಿಗೆ ಬಿರುಕು ಇದೆ.
- ಕೆಳಮಹಡಿ ಎಡಭಾಗದಲ್ಲಿನ ವಾಶ್ ಬೆಸಿನ ಗೋಡೆಗೆ ಹಾಗೂ ಸ್ನಾನ ಗೃಹದ ಗೋಡೆಯ ಮೇಲೆ ಬಿರುಕು ಇದೆ.
- ಕೆಲ ಶೌಚಾಲಯಗಳ ಗೋಡೆಯೊಂದಿಗೆ ಟೈಲ್ಸ್‌ಗಳಿಗೆ ಬಿರುಕುಗಳಿವೆ.
- ಸ್ಟೇರ್‌ಕೇಸ್‌ದ ಒಂದು ಹೊರಗೋಡೆ ಹಾಗೂ ಮೂರು ಗೋಡೆಗಳ ಒಲಭಾಗದಲ್ಲಿ ಬಿರುಕುಗಳು ಕಂಡುಬಂದವು.
- ಕಟ್ಟಡದ ಮೇಲ್ಮಹಡಿಯ ಬಲಭಾಗದ ಸ್ನಾನಗೃಹಗಳ ಹೊರಗೋಡೆಗಳ ಮೇಲೆ ಬಿರುಕುಗಳು ಹಾಗೂ ನಾಲ್ಕು ಶೌಚಾಲಯಗಳ ಒಳಭಾಗದಲ್ಲಿ ಬಿರುಕುಗಳಿವೆ.
- ಮೇಲ್ಮಹಡಿಯ ಬಲಭಾಗದ ವಾಶ್ ಬೆಸಿನ್ ಗೋಡೆಯ ಮೇಲೆ ಹಾಗೂ ಸ್ನಾನಗೃಹ/ಶೌಚಾಲಯ ಗೃಹಗಳ ಗೋಡೆಗಳ ಮೇಲೆ ಬಿರುಕುಗಳಿವೆ.
- ಮೇಲ್ಮಹಡಿಯ ಕೊಠಡಿಗಳ ಒಳಭಾಗದಲ್ಲಿ ಬಿರುಕುಗಳಿವೆ.
- ಗೋಡೆಗಳ ಸ್ಕರ್ಟಿಂಗ್‌ಗೆ ಅಳವಡಿಸಿದ ಟೈಲ್ಸ್ ಗಳು ಸರಿಯಾಗಿ ಗಟ್ಟಿಯಾಗಿ ಜೋಡಣೆ ಆಗಿಲ್ಲ.
- ಕಟ್ಟಡದ ಹೊರಭಾಗದಲ್ಲಿ ನೆಲಕ್ಕೆ ಹೊಂದಿಕೊಂಡು ನಾಲ್ಕೂ ಬದಿಗೆ ಗೋಡೆ ಹಾಗೂ ನೆಲದ ಮಧ್ಯೆ ಬಿರುಕುಬಿಟ್ಟಿವೆ.

ಪ್ರಯುಕ್ತ ಸದರಿ ಕಟ್ಟಡ ಕಾಮಗಾರಿಯು ಮೇಲ್ನೋಟಕ್ಕೆ ಕಳಪೆಯಾಗಿರುವುದು ಕಂಡುಬರುತ್ತದೆ ಎಂದು ನಮೂದಿಸಿರುತ್ತಾರೆ.

(5) ಆರ್.ಎಂ.ಎಸ್.ಎ. ಹೆಣ್ಣು ಮಕ್ಕಳ ವಸತಿ ನಿಲಯ **ಢವಳಗಿ ತಾಲ್ಲೂಕು ಮುದ್ದೇಬಿಹಾಳ** ದಿನಾಂಕ: 25/06/2019 ರಂದು ಕಟ್ಟಡ ಕಾಮಗಾರಿ ಪರಿಶೀಲಿಸಲಾಗಿದೆ.

- ಕಟ್ಟಡದ ಮುಂಭಾಗದ ಬಲಗಡೆ ಗೋಡೆಯ ಮೇಲೆ, ಕಟ್ಟಡದ ಹಿಂಭಾಗದಲ್ಲಿ ಹಾಗೂ ಕಟ್ಟಡದ ಎಡಭಾಗದ ಗೋಡೆಯ ಮೇಲೆ ಅಲ್ಲಲ್ಲಿ ಬಿರುಕುಗಳು ಕಂಡು ಬಂದಿವೆ. ಮೇಲ್ಮಹಡಿಯ ಒಂದು ಕೋಣೆಯನ್ನು ಹೊರತುಪಡಿಸಿದರೆ ಉಳಿದದೆಲ್ಲ ಕೋಣೆಗಳು ಇಂಟರ್ ಲಾಕನ್ನು ಕಾಂಟ್ರ್ಯಾಕ್ಟರ್ ಇವರು ಬಳಸಿದ ಕೈಗಳಿಂದ (ಕೀ) ತೆಗೆಯಲು ಆಗಲಿಲ್ಲ.
- ಅಡುಗೆ ಕೋಣೆಯ ಒಳಬಾಗಿಲಿನ ಮೇಲೆ ಬೀಮದ ಕೆಳಗಡೆ ಬಿರುಕು ಇದೆ.
- ಊಟ ಮಾಡುವ ಕೋಣೆಯ ಒಂದು ಗೋಡೆಗೆ ಬಿರುಕು ಹಾಗೂ ಬೀಮದ ಕೆಳಗಡೆ ಅಡ್ಡಲಾಗಿ ಬಿರುಕು ಕಂಡು ಬಂದಿದೆ.
- ಕೆಳಮಹಡಿಯ 4 ಕೋಣೆಗಳಲ್ಲಿ ಒಳಭಾಗದಲ್ಲಿನ ಗೋಡೆಗಳಲ್ಲಿ ಬಿರುಕುಗಳು ಇವೆ.
- 2- ಶೌಚಾಲಯಗಳ ಗೋಡೆಗೆ ಬಿರುಕು ಹಾಗೂ 2-ಶೌಚಾಲಯಗಳ ಬೀಮ ಕೆಳಗಡೆ ಬಿರುಕುಗಳಿರುವುದು ಕಂಡುಬಂದಿತು.
- ಈ ಕಟ್ಟಡದ ಎಡಬದಿ ಬಾತ್ ರೂಮ್‌ದ ವಾಶ ಬೆಸಿನ್ ಮೇಲ್ಭಾಗದ ಬೀಮ ಕೆಳಗೆ ಕ್ರ್ಯಾಕ ಅಡ್ಡಲಾಗಿ ಇದೆ.
- ಸ್ಟೇರ್‌ಕೇಸ್ ಗೋಡೆಗಳ ಒಳ ಮೇಲ್ಕೈ ಮೇಲೆ ಬಿರುಕುಗಳಿವೆ.
- ಕೆಳಮಹಡಿಯಲ್ಲಿನ ಅರಿವೆ ತೊಳೆಯುವ, ಪಾತ್ರೆ ತೊಳೆಯುವ ಕೋಣೆಯ ಬೀಮ ಕೆಳಗೆ ಅಡ್ಡಲಾಗಿ ಬಿರುಕು ಇದೆ. ಲಂಬವಾಗಿ ಕಾಲಂಕ್ಕೆ ಹೊಂದಿಕೊಂಡು ಬಿರುಕು ಇದೆ.

ಕಾಮಗಾರಿಗಳನ್ನು ಗುಣಮಟ್ಟ ನಿಯಂತ್ರಣ ಅಧಿಕಾರಿಗಳಿಂದ ಸ್ಥಳೀಯ ತಾಂತ್ರಿಕ ವಿಭಾಗದಿಂದ, ರಾಜ್ಯ ಪ್ರಾಜೆಕ್ಟ್ ಇಂಜಿನಿಯರ್ ಇವರಿಂದ ಪರಿಶೀಲಿಸಿದ ನಂತರವೆ ಮತ್ತು ಇವುಗಳ ಕುರಿತು ಎಇಇ ಇವರು ದೃಢೀಕರಿಸಿದ ನಂತರ ಹಣ ಸಂದಾಯವಾಗಿದ್ದು ಯಾವುದೇ ರೀತಿಯಲ್ಲಿ ಕಾಮಗಾರಿಯು, ಕಳಪೆ ಕಾಮಗಾರಿಯಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

8. ಈ ಮೇಲ್ಕಾಣಿಸಿದ ಅಂಶಗಳಿಂದ ಜಿಲ್ಲಾ ಯೋಜನಾ ಉಪ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಅಭಿಯಾನ ಯೋಜನೆ, ವಿಜಯಪುರ ಇವರು ಸಲ್ಲಿಸಿದ ತನಿಖಾ ವರದಿಯನ್ವಯ ಕಾಮಗಾರಿಗಳು ಕಳಪೆ ಗುಣಮಟ್ಟದ ಕಾಮಗಾರಿಗಳೆಂದು ನಮೂದಿಸಿ ಸಲ್ಲಿಸಿರುವುದರಿಂದ ಎದುರುದಾರ 2 ಇವರು ತಮ್ಮ ಆಕ್ಷೇಪಣೆಯಲ್ಲಿ ಸಲ್ಲಿಸಿರುವ ಅಂಶಗಳನ್ನು ಒಪ್ಪಲು ಬರುವುದಿಲ್ಲ. ಎದುರುದಾರ 1 ಇವರು ಎನ್.ಸಿ.ಸಿ ಕಂಪನಿಯ ಗುತ್ತಿಗೆದಾರರಿದ್ದು, ಖಾಸಗೀ ವ್ಯಕ್ತಿಯಾಗಿರುತ್ತಾರೆ. ಎದುರುದಾರ 2 ಇವರು ಸಮಗ್ರ ಶಿಕ್ಷಣ ಅಭಿಯಾನ ಯೋಜನೆ ಅಡಿಯಲ್ಲಿ ಪರಿಶೀಲಿಸುವ ತಾಂತ್ರಿಕ ಪರಿಣಿತಿಯನ್ನು ಹೊಂದಿರುವ ವ್ಯಕ್ತಿಯಾಗಿದ್ದು, ಸದರಿ ಕಾಮಗಾರಿಗಳು ಕಳಪೆ ಎಂದು ಕಂಡು ಬಂದರೂ ಸಹಾ ಗುತ್ತಿಗೆದಾರರಿಗೆ ಬಿಲ್ಲನ್ನು ಸಂದಾಯ ಮಾಡಲು ಅನುಮೋದಿಸಿರುವುದು ದಾಖಲೆಗಳಿಂದ ಕಂಡುಬರುತ್ತದೆ.

9. ಎದುರುದಾರ 2 ಇವರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ 12(3) ರನ್ವಯ ಕ್ರಮ ಜರುಗಿಸಬಹುದಾಗಿರುತ್ತದೆ.

10. ಮೇಲೆ ಚರ್ಚಿಸಲಾದ ಕಾರಣಗಳ ಹಿನ್ನಲೆಯಲ್ಲಿ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ 2ನೇ ಎದುರುದಾರರಾದ ಶ್ರೀ ವಿಜಯ, ಕಾರ್ಯಪಾಲಕ ಅಭಿಯಂತರರು, ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಬೆಂಗಳೂರು ರವರ ದುರ್ನಡತೆ ಎಸಗಿದ್ದು ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು

* ಮೇಲ್ಮಹಡಿಯ ಎಡಭಾಗದಲ್ಲಿನ ಶೌಚಾಲಯಗಳ ಎದುರು ಗೋಡೆಯ ಮೇಲೆ ಬೀಮ್ ಕೆಳಗೆ ಅಡ್ಡಲಾಗಿ ಬಿರುಕು ಇದೆ ಎಂಬಂತೆ ಉಲ್ಲೇಖಿಸಿ ತನಿಖಾವರದಿಯನ್ನು ಸಲ್ಲಿಸಿರುತ್ತಾರೆ.

**6. 1ನೇ ಎದುರುದಾರನ ಆಕ್ಷೇಪಣೆ:-**

ಎನ್.ಸಿ.ಸಿ. ಕಂಪನಿಯ (ನಾಗಾರ್ಜುನ ನಿರ್ಮಾಣ ಕಂ.,) ಮುಖ್ಯಸ್ಥರಿದ್ದು, ಖಾಸಗಿ ವ್ಯಕ್ತಿಯಾಗಿರುತ್ತಾರೆ. ಸಮಗ್ರ ಶಿಕ್ಷಣ ಅಭಿಯಾನ ಯೋಜನೆ ಅಡಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆ ಹೆಣ್ಣು ಮಕ್ಕಳ ವಸತಿ ನಿಲಯದ ಕಟ್ಟಡದ ಕಾಮಗಾರಿಗಳನ್ನು ದಿ. 17.3.2013ರಂದು ಮೆ..ಎನ್.ಸಿ.ಸಿ. ಪ್ರೈ.ಲಿ., ಬೆಂ., ರವರಿಗೆ ಗುತ್ತಿಗೆ ಆಧಾರದ ಮೇಲೆ 20 ತಿಂಗಳ ಗುತ್ತಿಗೆ ಅವಧಿ ನೀಡಿ ಕೆಲಸ ವಹಿಸಲಾಗಿದ್ದು, ಸದರಿ ವಸತಿ ನಿಲಯ ನಿರ್ಮಾಣದ ಅಂದಾಜು ಮೊತ್ತ 198.55 ಲಕ್ಷಗಳಿದ್ದು, ಪರಿಷ್ಕೃತ ಮೊತ್ತ 288.38 ಲಕ್ಷಗಳಾಗಿರುತ್ತದೆ. ಗುತ್ತಿಗೆದಾರರು 22.6.2013 ದಿನಾಂಕದಂದು ಕಾಮಗಾರಿಯನ್ನು ಪ್ರಾರಂಭಿಸಿ, 20.2.2017 ರಂದು ಕಾಮಗಾರಿಯನ್ನು ಪೂರ್ಣಗೊಳಿಸಿ ದಿ. 3.1.2018ರಂದು ಸಂಬಂಧಿಸಿದ ಇಲಾಖೆಗೆ ವಸತಿ ನಿಲಯವನ್ನು ಹಸ್ತಾಂತರಿಸಿರುತ್ತಾರೆ. (1ನೇ ಎದುರುದಾರರು, ಖಾಸಗೀ ವ್ಯಕ್ತಿಯಾಗಿದ್ದು, ಎನ್.ಸಿ.ಸಿ ಪ್ರೈವೆಟ್ ಲಿಮಿಟೆಡ್ ಕಂಪನಿಯ ಗುತ್ತಿಗೆದಾರರಾಗಿರುತ್ತಾರೆ).

**7. 2ನೇ ಎದುರುದಾರನ ಆಕ್ಷೇಪಣೆ:-**

2ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ದಿ. 27.7.2020ರಂದು ಸಲ್ಲಿಸಿದ್ದು ಪರಿಶೀಲಿಸಲಾಗಿ, ಇಂಡಿ ತಾಲ್ಲೂಕಿನ 5 ಕಾಮಗಾರಿಗಳನ್ನು ಎನ್.ಸಿ.ಸಿ. ಕಂಪನಿಗೆ ಗುತ್ತಿಗೆ ನೀಡಿದ್ದು ಸದರಿ ಎನ್.ಸಿ.ಸಿ. ಕಂಪನಿಯು ಕಾಮಗಾರಿಗಳನ್ನು ಪೂರೈಸಿ ವರದಿ ಸಲ್ಲಿಸಿದ ನಂತರ ಗುತ್ತಿಗೆದಾರರ ಟೆಂಡರ್ ಹಣವನ್ನು ಚೆಕ್ಕುಗಳ ಮುಖಾಂತರ ನೀಡಲಾಗಿರುತ್ತದೆ, ಸದರಿ ಕಾಮಗಾರಿಯನ್ನು ಆರ್.ಎಂ.ಎಸ್.ಎ. ವಿಭಾಗದಿಂದ ಮಾಡಿದ್ದು ರೂ. 40 ಕೋಟಿಗಳ ಕಾಮಗಾರಿಯಾಗಿದ್ದು, ಸದರಿ

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಮತ್ತು 2ನೇ ಎದುರುದಾರನು ದಿನಾಂಕ 31/01/2019 ರಂದು ನಿವೃತ್ತಿ ಹೊಂದಿರುವುದರಿಂದ, ಕೆಸಿಎಸ್‌ಆರ್ ನಿಯಮ 214(2)(ಬಿ)ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಸಕ್ಷಮ ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

17/2/21

[ನ್ಯಾಯಮೂರ್ತಿ ಬಿ.ಎಸ್. ಪಾಟೀಲ್]
ಉಪಲೋಕಾಯುಕ್ತರು,
**ಕರ್ನಾಟಕ ರಾಜ್ಯ, ಬೆಂಗಳೂರು.**